"ಮಧುರ ಮಕ್ಕಳೇ - ನೀವು ಆತ್ಮಿಕ ಯೋಧರಾಗಿದ್ದೀರಿ, ನಿಮಗೆ ತಂದೆಯಿಂದ ಬಹಳ ದೊಡ್ಡ-ದೊಡ್ಡ ಜ್ಞಾನದ ಗೋಲಿ ಸಿಕ್ಕಿದೆ, ಯಾವುದರಿಂದ ಮಾಯಾ ಶತ್ರುವಿನ ಮೇಲೆ ವಿಜಯವನ್ನು ಪಡೆಯಬೇಕು"

ಪ್ರಶ್ನೆ: ಯಾವ ರಹಸ್ಯವನ್ನು ತಿಳಿದುಕೊಳ್ಳುವುದರಿಂದ ನೀವು ನಿಶ್ಚಿಂತ ಚಕ್ರವರ್ತಿ ಆಗಿ ಬಿಟ್ಟಿದ್ದೀರಿ?

ಉತ್ತರ: ಪೂರ್ತಿ ಡ್ರಾಮಾದ ರಹಸ್ಯಗಳನ್ನು ತಿಳಿದುಕೊಳ್ಳುವುದರಿಂದ ನಿಶ್ಚಿಂತ ಚಕ್ರವರ್ತಿ ಆಗಿ ಬಿಟ್ಟಿದ್ದೀರಿ. ನಾವು ಹಳೆಯ ಲೆಕ್ಕಾಚಾರವನ್ನು ಸಮಾಪ್ತಿ ಮಾಡಿ 21 ಜನ್ಮಗಳಿಗೆ ಜ್ಞಾನ-ಯೋಗದಿಂದ ತಮ್ಮ ಜೋಳಿಗೆಯನ್ನು ತುಂಬಿಸಿಕೊಳ್ಳುತ್ತಿದ್ದೇವೆಂದು ಈಗ ನಿಮಗೆ ತಿಳಿದಿದೆ. ನಾವು ಶಿವಬಾಬನ ಮೊಮ್ಮಕ್ಕಳು, ಬ್ರಹ್ಮಾ ತಂದೆಯ ಮಕ್ಕಳಾಗಿದ್ದೇವೆ ಅಂದಾಗ ಯಾವ ಮಾತಿನ ಚಿಂತೆ ಮಾಡಬೇಕು.

ಗೀತೆ: ಅದೃಷ್ಟವನ್ನು ಬೆಳಗಿಸಿಕೊಂಡು ಬಂದಿದ್ದೇನೆ..........

ಓಂ ಶಾಂತಿ. ನನ್ನ ಮುದ್ದಾದ ಮಕ್ಕಳೇ, ನೀವು ಗುಪ್ತ ಸೇನೆ ಆಗಿದ್ದೀರಿ ಮತ್ತು ನೀವು ಮಕ್ಕಳಿಗೆ ಜ್ಞಾನ ಅಸ್ತ್ರ ದೊಡ್ಡ-ದೊಡ್ಡ ಗೋಲ ಸಿಗುತ್ತಿದೆ ಎಂದು ತಂದೆ ತಿಳಿಸುತ್ತಾರೆ. ಇದು ಅದೇ ಗೀತೆಯ ಭಾಗ (ಎಪಿಸೋಡ್) ಅರ್ಥಾತ್ ಡ್ರಾಮಾದ ಪಾರ್ಟ್ ಪುನಃ ಮಾಡುತ್ತಿದ್ದಾರೆ ಎಂದು ನಿಮಗೆ ತಿಳಿದಿದೆ. ಒಂದೇ ಗೀತೆಗೆ ಮಹಾಭಾರತ ಯುದ್ಧದ ಸಂಬಂಧವಿದೆ. ನೀವು ಮಕ್ಕಳು ಗುಪ್ತ ಸೇನೆ ಆಗಿದ್ದೀರಿ. ಹೇಗೆ ಗೋಲ ಸ್ವಚ್ಛ (ರಿಫೈನ್) ಆಗಬೇಕೆಂದು ಮನುಷ್ಯರು ಪ್ರಾಕ್ಟೀಸ್ ಮಾಡುತ್ತಿದ್ದಾರೆ. ಹಾಗೆಯೇ ಶಿವ ತಂದೆಯೂ ಸಹ ಬ್ರಹ್ಮನ ಮೂಲಕ ನಿಮಗೆ ಬಹಳ ಒಳ್ಳೆ ಜ್ಞಾನದ ಗೋಲವನ್ನು ಕೊಡುತ್ತಿದ್ದೇನೆ ಎಂದು ಹೇಳುತ್ತಾರೆ. ಅಂದಾಗ ನೀವು ಮನುಷ್ಯರಿಗೆ ಗೀತೆಯ ಪಾರ್ಟ್ ಪುನಃ ಮಾಡುತ್ತಿದ್ದಾರೆ ಹಾಗೂ ಸ್ವರ್ಗದ ದೈವೀ ರಾಜ್ಯ ಸ್ಥಾಪನೆ ಆಗುತ್ತಿದೆ ಎಂದು ಚೆನ್ನಾಗಿ ಶಂಖ ಧ್ವನಿ ಮಾಡಿ. ನೀವು ಮಕ್ಕಳು ನಿಮಗಾಗಿ ರಾಜ್ಯವನ್ನು ಸ್ಥಾಪನೆ ಮಾಡುತ್ತಿದ್ದೀರಿ. ಆ ಸೇನೆ ರಾಜಾ-ರಾಣಿಗೋಸ್ಕರ ಪರಿಶ್ರಮ ಪಡುತ್ತಾರೆ, ನೀವು ನಿಮಗೋಸ್ಕರ ಮಾಯೆಯ ಮೇಲೆ ವಿಜಯವನ್ನು ಪಡೆದು 5000 ವರ್ಷದ ಹಿಂದೆ ಹಾಗೆ 21 ಜನ್ಮಗಳಿಗೆ ಆಸ್ತಿಯನ್ನು ಪಡೆದುಕೊಳ್ಳುತ್ತೀರಿ. ನಾವು ನಮ್ಮ ಅದೃಷ್ಟವನ್ನು ಮಾಡಿಕೊಳ್ಳುತ್ತಿದ್ದೇವೆಂದು ನಿಮ್ಮ ಬುದ್ಧಿಯಲ್ಲಿ ಇದೆ. ಅವರು ಅಲ್ಪಕಾಲಕ್ಕಾಗಿ ಫಲವನ್ನು ಪಡೆಯುತ್ತಾರೆ. ನೀವು ಇಲ್ಲಿ ಪ್ರತಿಯೊಬ್ಬರು ತಮ್ಮ 21 ಜನ್ಮಗಳ ಪ್ರಾಲಬ್ಧವನ್ನು ಮಾಡಿಕೊಳ್ಳುತ್ತೀರಿ. ನೀವು ಮಮ್ಮಾ-ಬಾಬನಿಗಿಂತಲೂ ಶ್ರೇಷ್ಠರಾಗಬಹುದು. ಆದರೆ ಮಮ್ಮಾ ಬಾಬನಿಗಿಂತ ಯಾರೂ ಮೇಲೆ ಹೋಗಲು ಸಾಧ್ಯವಿಲ್ಲ ಎಂದು ವಿವೇಕ ಹೇಳುತ್ತದೆ. ಸೂರ್ಯ, ಚಂದ್ರನಿಗೆ ಭಲೆ ಗ್ರಹಣ ಹಿಡಿಯಬಹುದು ಆದರೆ ನಾಶ ಆಗುವುದಿಲ್ಲ. ನಕ್ಷತ್ರಗಳಾದರೆ ಬೀಳುತ್ತವೆ. ನನ್ನ ಮುದ್ದಾದ ಮಕ್ಕಳೇ ನಾನು ನೀವು ಮಕ್ಕಳನ್ನು ಏಕೆ ನೆನಪು ಮಾಡುವುದಿಲ್ಲ ಎಂದು ತಂದೆ ಹೇಳುತ್ತಾರೆ. ಅಂತಹ ಅಗಲಿ ಹೋಗಿ ಸಿಕ್ಕಿರುವ ಮಕ್ಕಳನ್ನು ಏಕೆ ನೆನಪಿಗೆ ಬರುವುದಿಲ್ಲ! ಆದರೆ ಅನುಭವ ಹೇಳುತ್ತದೆ ಮಕ್ಕಳು ತಂದೆಯನ್ನು ನೆನಪು ಮಾಡುವುದು ಮರೆತು ಬಿಡುತ್ತಾರೆ. ತಮ್ಮನ್ನು ಪ್ರಿಯತಮೆ ಎಂದು ತಿಳಿಯುವುದರಿಂದಲೂ ಸಹ ಹೆಚ್ಚು ಶಕ್ತಿ ಸಿಗುತ್ತದೆ. ಏಕೆಂದರೆ ಪ್ರಿಯತಮನ ಜೊತೆ ಪ್ರಿಯತಮೆ ಹಾಫ್ ಪಾರ್ಟ್ನರ್ ಆಗಿದ್ದಾರೆ. ಮಕ್ಕಳಂತೂ ತಂದೆಗೆ ಪೂರ್ತಿ ವಾರಸದಾರರಾಗುತ್ತಾರೆ. ಧ್ಯಾನಿ ಆತ್ಮರಿಗೆ ಸಾಕ್ಷಾತ್ಕಾರದ ಇಚ್ಛೆ ಇರುತ್ತದೆ. ಯಾರು ಪೂರ್ತಿ ದಿನ ಬಾಬಾ-ಬಾಬಾ ಎಂದು ಹೇಳುತ್ತಿರುತ್ತಾರೆ ಅವರಿಗಂತೂ ಜ್ಞಾನಿ ಎಂದು ಹೇಳುತ್ತಾರೆ. ಬಾಬನಿಗೆ ಜ್ಞಾನದ ಬಹಳ ಆಸಕ್ತಿ ಇದೆ. ಜ್ಞಾನದ ಗೋಲಿ ಹೊಸ ಮಾತಾಗಿದೆಯಲ್ಲವೇ. ಧ್ಯಾನದಲ್ಲಿ ಬಹಳ ಸಾಕ್ಷಾತ್ಕಾರ ಮುಂತಾದವು ಮಾಡುತ್ತಿರುತ್ತಾರೆ, ಆದರೆ ಅವರಿಗೆ ಜ್ಞಾನ ಏನೂ ಸಿಗುವುದಿಲ್ಲ. ಧ್ಯಾನ ಕೆಟ್ಟದ್ದು ಎಂದು ತಂದೆ ಹೇಳುವುದಿಲ್ಲ. ಭಕ್ತಿ ಮಾರ್ಗದಲ್ಲಿ ಸಾಕ್ಷಾತ್ಕಾರ ಆದರೆ ಖುಷಿ ಆಗುತ್ತಾರೆ. ಆದರೆ ಮುಕ್ತಿಧಾಮಕ್ಕೆ ಹೋಗಲು ಸಾಧ್ಯವಿಲ್ಲ. ನೀವು ನನ್ನ ಧಾಮಕ್ಕೆ ಬರುವವರೆಂದು ತಂದೆ ಹೇಳುತ್ತಾರೆ. ಈ ಜ್ಞಾನದಿಂದ ನಾವು ಭವಿಷ್ಯ ರಾಜಕುಮಾರರಾಗುತ್ತೇವೆಂದು ನಿಮಗೆ ಗೊತ್ತಿದೆ. ಈ ಕಣ್ಣಿಂದ ನೋಡಲು ದೇವತೆಗಳು ಇಲ್ಲಿ ಇರುವುದೇ ಇಲ್ಲ. ಚಿತ್ರಗಳಂತೂ ಇದೆಯಲ್ಲವೇ. ಕೃಷ್ಣನನ್ನು ನೀವು ನೋಡುತ್ತೀರಿ, ಅಲ್ಲಿ ರಾಜಕುಮಾರ-ಕುಮಾರಿಯರ ರಾಸ್ ವಿಲಾಸ ಆಗುತ್ತದೆ ಅಥವಾ ಬಾಲ ಲೀಲೆಯನ್ನೂ ಸಹ ನೋಡುತ್ತೀರಿ. ಆದರೆ ಮಹಾರಾಣಿ ಯಾವಾಗ ಆಗುತ್ತಾರೆ, ಯಾವಾಗ ರಾಜಕುಮಾರ ಸಿಗುತ್ತಾರೆ? ಅದಂತೂ ಗೊತ್ತೇ ಇಲ್ಲ. ನಾವು ಭವಿಷ್ಯ ಮಹಾರಾಣಿ ಆಗುತ್ತಿದ್ದೇವೆ ಎಂದು ನಿಶ್ಚಯವಾಗಲು ತಂದೆ ಸಾಕ್ಷಾತ್ಕಾರ ಮಾಡಿಸುತ್ತಾರೆ. ಅಲ್ಲಿ ನಮ್ಮ ಆತ್ಮ ಹಾಗೂ ಶರೀರ ಎರಡೂ ಪವಿತ್ರವಾಗಿರುತ್ತದೆ ಎಂದು ಜ್ಞಾನದಿಂದಲೂ ತಿಳಿದುಕೊಳ್ಳಬಹುದು. ಇಲ್ಲಿ ಹಂ ಸೋವಿನ (ನಾವೇ ಅದು) ಮಂತ್ರವಿದೆ ಅದು ಈಗಿನ ಮಂತ್ರವಾಗಿದೆ. ಶಿವ ತಂದೆಯನ್ನು ನೆನಪು ಮಾಡುವುದರಿಂದ ಶಕ್ತಿ ಸಿಗುತ್ತದೆ. ಆತಮ್ತಾಯಿ ಆಟವನ್ನು ತೋರಿಸುತ್ತಾರೆ. ಹೇ ಮುದ್ದಾದ ಮಕ್ಕಳೇ, ಭಲೆ ಎಲ್ಲಾ ಕೆಲಸ-ಕಾರ್ಯಗಳನ್ನು ಮಾಡಿ ಕೇವಲ ಬುದ್ಧಿಯಿಂದ ತಂದೆಯನ್ನು ನೆನಪು ಮಾಡಬೇಕು ಎಂದು ತಂದೆ ಸ್ವಯಂ ತಿಳಿಸುತ್ತಿದ್ದಾರೆ. ನಿಮ್ಮದು ಪರಮಧಾಮ ಒಂದೇ ಆಗಿದೆ. ಅವರು ಯಾತ್ರೆಗಳಿಗೆ ಹೋಗುತ್ತಾರೆಂದರೆ ಬಹಳ ಸುತ್ತಾಡುತ್ತಾರೆ. ನಾಲ್ಕು ಧಾಮಗಳು ಬುದ್ಧಿಯಲ್ಲಿ ಇದೆ. ನಿಮ್ಮ ಬುದ್ಧಿಯಲ್ಲಿ ಕೇವಲ ಪರಮಧಾಮವಿದೆ. ಯಾರನ್ನಾದರು ನಿಮಗೆ ಏನು ಬೇಕು? ಎಂದು ಕೇಳಿ. ಮುಕ್ತಿಬೇಕು ಎಂದು ಹೇಳುತ್ತಾರೆ. ಸನ್ಯಾಸಿಗಳೂ ಸಹ ಶಾಂತಿಗಾಗಿ ಮನೆ ಮಠವನ್ನು ಬಿಡುತ್ತಾರೆ. ಕಾಡಿಗೆ ಹೋಗುತ್ತಾರೆ. ನಾವು ಜನನ ಮರಣದಿಂದ ಬಿಡುಗಡೆ

ಆಗಲಿ, ಮೋಕ್ಷ ಸಿಗಲಿ ಎಂದು ತಿಳಿದುಕೊಳ್ಳುತ್ತಾರೆ. ಆದರೆ ಸದಾಕಾಲಕ್ಕಾಗಿ ಯಾರಿಗೂ ಮೋಕ್ಷ ಸಿಗುವುದಿಲ್ಲ. ಇದು ಅನಾದಿ ಮಾಡಿ-ಮಾಡಲ್ಪಟ್ಟಂತಹ ಡ್ರಾಮಾ ಆಗಿದೆ. ಈ ಡ್ರಾಮಾದ ರಹಸ್ಯಗಳನ್ನು ಯಾರೂ ತಿಳಿದುಕೊಂಡಿಲ್ಲ. ರಚಯಿತ, ನಿರ್ದೇಶಕರು ಹಾಗೂ ಪಾತ್ರಧಾರಿಯ ಕುರಿತು ತಿಳಿದಿಲ್ಲ. ಈ ಡ್ರಾಮಾ ಪೂರ್ತಿ 4 ಭಾಗಗಳು ಎಂದು ನಿಮಗೆ ಗೊತ್ತಿದೆ. ಸತ್ಯಯುಗದ ಆಯಸ್ಸು ದೊಡ್ಡದು ಎಂದಲ್ಲ. ಜಗನ್ನಾಥ ಪುರಿಯಲ್ಲಿ ಅಕ್ಕಿಯ ಪಾತ್ರೆಯನ್ನು ಇಡುತ್ತಾರೆಂದರೆ ಪೂರ್ತಿ 4 ಭಾಗಗಳು ಆಗುತ್ತದೆ. ಈ ಪ್ರಪಂಚವೇ 4 ಯುಗಗಳ ಡ್ರಾಮಾ, ಅದರ ಆದಿ-ಮಧ್ಯ-ಅಂತ್ಯದ ಬಗ್ಗೆ ನಿಮಗೇ ಗೊತ್ತಿದೆ, ಇದು ಆಟ ಆಗಿದೆ. ನಾವೇ ದೇವೀ-ದೇವತೆಗಳು ರಾಜ್ಯ ಮಾಡುತ್ತಿದ್ದವು. ಮತ್ತೆ ನಾವೇ ಸೋತಿದ್ದೆವು ನಾವೇ ಪುನಃ ವಿಜಯವನ್ನು ಪಡೆದುಕೊಳ್ಳುತ್ತಿದ್ದೇವೆ. 5000 ವರ್ಷದ ಮಾತಾಗಿದೆ. ಇಲ್ಲಿ ಪ್ರತಿಯೊಬ್ಬರು ತಮಗಾಗಿ ಪುರುಷಾರ್ಥ ಮಾಡಿಕೊಳ್ಳುತ್ತಾರೆ. ಯಾರು ಎಷ್ಟು ತನ್ನ ಸಮಾನವನ್ನಾಗಿ ಮಾಡುತ್ತಾರೋ, ಅವರಿಗೆ ತಂದೆ ಉಡುಗೊರೆ ಕೊಡುತ್ತಾರೆ. ಯೋಗಾಗ್ನಿಯಿಂದ ನಿಮ್ಮ ಪಾಪಗಳು ತಾನಾಗಿಯೇ ವಿನಾಶ ಆಗಿ ಬಿಡುತ್ತದೆ, ನಾನು ಏನೂ ಮಾಡುವುದಿಲ್ಲ ಎಂದು ತಂದೆ ತಿಳಿಸುತ್ತಾರೆ. ನೀವು ನಿಮ್ಮ ಪುರುಷಾರ್ಥದಿಂದ ರಾಜ್ಯಭಾಗ್ಯವನ್ನು ಪಡೆದುಕೊಳ್ಳುತ್ತೀರಿ, ರಾಜಾ ಜನಕನ ಉದಾಹರಣೆ ಇದೆಯಲ್ಲವೇ. ಇದಕ್ಕೆ ಸಾಕ್ಷಾತ್ಕಾರ ಎಂದು ಹೇಳುತ್ತಾರೆ.

ನಾವು ಜೀವನ್ಮುಕ್ತಿಯಲ್ಲಿ ಹೋಗಲು ಪುರುಷಾರ್ಥವನ್ನು ಮಾಡುತ್ತಿದ್ದೇವೆಂದು ನಿಮಗೆ ಗೊತ್ತಿದೆ, ಯಾವುದರಲ್ಲಿ ಜ್ಞಾನದ ಅವಶ್ಯಕತೆ ಇದೆ. ಮುಕ್ತಿಯಲ್ಲಿ ನಾವು ಇರಬೇಕಾಗಿಲ್ಲ. ನಮ್ಮದು ಆಲ್‌ರೌಂಡ್ ಪಾರ್ಟ್ ಆಗಿದೆ. ಹೇಗೆ ನೀವು ರೈಲಿನಲ್ಲಿ ಬರುತ್ತೀರೆಂದರೆ ವಯಾ ಅಹ್ಮದಾಬಾದ್ ಬರುತ್ತೀರಲ್ಲವೇ ಹಾಗೆಯೇ ನಾವೂ ಸಹ ಜೀವನ್ಮುಕ್ತಿಯಲ್ಲಿ ಹೋಗಬೇಕೆಂದರೆ ವಯಾ ಮುಕ್ತಿ. ಗಳಿಗೆ-ಗಳಿಗೆಗೆ ಪರಂಧಾಮವನ್ನು ನೆನಪು ಮಾಡಿ. ಆ ಶಾಲೆಯಲ್ಲಿ 5-6 ಗಂಟೆಗಳು ಓದುತ್ತಾರೆ, ಇಲ್ಲಿ ಇಷ್ಟು ಓದಲು ಸಾಧ್ಯವಿಲ್ಲ. ಆದ್ದರಿಂದ ಒಂದು ಗಳಿಗೆ-ಅರ್ಧ ಗಳಿಗೆ ಎಂದು ಹೇಳುತ್ತಾರೆ ಇದರಲ್ಲಿ ಅಮೃತವೇಳೆ ಒಳ್ಳೆಯದು. ಸ್ನಾನವೂ ಅಮೃತವೇಳೆ ಮಾಡಲಾಗುತ್ತದೆ. ಒಂದುಬಾರಿ ಮುರಳಿಯನ್ನು ಕೇಳಿ ಮತ್ತೆ ಆ ಪಾಯಿಂಟ್ಸ್ನ್ನು ರಿಪೀಟ್ ಮಾಡುತ್ತೀರಿ. ಟೇಪಿನಲ್ಲಿ ಮುರಳಿ ತುಂಬಿಸಲಾಗುತ್ತದೆ. ಭಲೆ ನೀವು 15 ದಿನದ ನಂತರ ಕೇಳಿದರೂ ಕೇಳುವುದರಿಂದ ರಿಫ್ರೆಶ್ ಆಗಿ ಬಿಡುತ್ತದೆ. ಕೆಲವೊಂದು ಪಾಯಿಂಟ್ಸ್ ಗಮನದಲ್ಲಿ ಇಲ್ಲವೆಂದರೆ ತಕ್ಷಣ ಬುದ್ಧಿಯಲ್ಲಿ ಬರುತ್ತದೆ. ಮುರಳಿಯ ಪಾಯಿಂಟ್ಸ್ ತಮ್ಮ ಹತ್ತಿರ ಇಟ್ಟುಕೊಳ್ಳುವುದು ಒಳ್ಳೆಯದು, ಇದು ಶಸ್ತ್ರವಾಗಿದೆಯಲ್ಲವೇ. ಭಹಳ ಮಕ್ಕಳು ಪುಸ್ತಕವನ್ನು ಇಟ್ಟುಕೊಳ್ಳುತ್ತಾರೆ. ಹೇಗೆ ಡಾಕ್ಟರ್, ವಕೀಲರು ತಮ್ಮ ಹತ್ತಿರ ಬಹಳ ಪುಸ್ತಕಗಳನ್ನು ಇಟ್ಟುಕೊಳ್ಳುತ್ತಾರೆ, ಯಾರು ಬಹಳ ಪುಸ್ತಕಗಳನ್ನು ಓದುತ್ತಾರೋ ಅವರು ಒಳ್ಳೆ ಔಷಧಿಯನ್ನು ಕೊಡುತ್ತಾರೆ. ಕೆಲವರಂತೂ ಚೆನ್ನಾಗಿ ಬರೆದುಕೊಳ್ಳುತ್ತಾರೆ, ಕೆಲವರು ಬರೆಯುವುದಿಲ್ಲ. ಇದೂ ಸಹ ನಿಮ್ಮ ಬಲಿಹಾರಿ ಆಗಿದೆ ಎಂದು ತಂದೆ ತಿಳಿಸುತ್ತಾರೆ. ಅದೂ ಅನೇಕ ವಿಕರ್ಮ ಆಗಿದೆ.ನಮ್ಮ ರಾಜಧಾನಿ ಸ್ಥಾಪನೆ ಆಗುತ್ತಿದೆ ಎಂದು ಮಕ್ಕಳಿಗೆ ಗೊತ್ತಿದೆ. ಹೇಗೆ ಮೊದಲು ಆಂಗ್ಲದವರು ವ್ಯಾಪರಕ್ಕಾಗಿ ಬಂದರು, ಆದರೆ ವ್ಯಾಪಾರ ಮಾಡುತ್ತಾ-ಮಾಡುತ್ತಾ ನೋಡಿ ಇವರು ಪರಸ್ಪರ ಯುದ್ಧ-ಜಗಳ ಮಾಡಿಕೊಳ್ಳುತ್ತಾರೆಂದರೆ ನಾವು ಏಕೆ ನಮ್ಮ ರಾಜ್ಯವನ್ನು ತೆಗೆದುಕೊಳ್ಳಬಾರದು. ನಿಮಗಾದರೆ ಬಹಳ ಸಹಜವಾಗಿದೆ. ಯಾರನ್ನೂ ಹೊಡೆಯುವ, ಸಾಯಿಸುವ ಮಾತಿಲ್ಲ. ನೀವು ಯೋಗಬಲದಿಂದ ರಾಜ್ಯಭಾಗ್ಯವನ್ನು ಪಡೆದುಕೊಳ್ಳುತ್ತೀರಿ. ಸತ್ಯಯುಗದಲ್ಲಿ ಲಕ್ಷ್ಮೀ-ನಾರಾಯಣರಿಗೆ ರಾಜ್ಯಭಾಗ್ಯ ಎಲ್ಲಿಂದ ಸಿಕ್ಕಿದೆ? ಕಲಿಯುಗಿ ಪೂರ್ತಿ ಆಗಲಿ ನಂತರ ಸತ್ಯಯುಗ ಹಗಲು ಆಗುವುದಿದೆ. ಹಗಲಿನಲ್ಲಿ ರಾಜ್ಯ, ರಾತ್ರಿಯಲ್ಲಿ ನರಕ ಇರುತ್ತದೆ, ತಂದೆ ಬರುತ್ತಾರೆಂದರೆ ನಾವು ಧನವಂತರಾಗುತ್ತೇವೆ. ಕಲಿಯುಗದ ನಂತರ ಸತ್ಯಯುಗ. ಅನೇಕ ಧರ್ಮಗಳ ನಂತರ ಒಂದು ಧರ್ಮ. ಯಾರು ಕಲ್ಪದ ಹಿಂದೆ ರಾಜ್ಯಭಾಗ್ಯವನ್ನು ಪಡೆದಿದ್ದಾರೆಯೋ ಅವರೇ ಈಗಲೂ ಸಹ ಪಡೆಯುತ್ತಿದ್ದಾರೆ. ಅದಕ್ಕೆ ಸ್ವರ್ಗದ ದೈವೀ ರಾಜ್ಯ ಎಂದು ಕರೆಯಲಾಗುತ್ತದೆ. ಈಗಂತೂ ನರಕವಾಗಿದೆ ಮತ್ತು ನಿರ್ವಾಣಧಾಮ ಬ್ರಹ್ಮಾಂಡವಾಗಿದೆ, ಎಲ್ಲಿ ನೀವು ಮೊಟ್ಟೆ ಹಾಗೆ (ಅಂಡಾಕಾರದಲ್ಲಿ) ಇರುತ್ತೀರಿ. ನಿಮ್ಮ ಬುದ್ಧಿಯಲ್ಲಿ ಇಡೀ ಬ್ರಹ್ಮಾಂಡ ಹಾಗೂ ಸೃಷ್ಟಿಯ ಜ್ಞಾನ ಇದೆ. ಎಷ್ಟು ಸಹಜ ಮಾತಾಗಿದೆ. ಗೀತೆಯ ಮಾತು ಮುಖ್ಯವಾಗಿದೆ. ಗೀತೆಯಲ್ಲಿ ಭಗವಂತನ ಹೆಸರು ಬದಲಾವಣೆ ಮಾಡಿದ್ದಾರೆ. ಇದು ಜ್ಞಾನದ ಗೋಲಿಯಾಗಿದೆ. ಒಂದು ಮಾತನ್ನು ಯುಕ್ತಿಯಿಂದ ತಿಳಿಸಿ. ಈ ಸಮಯದಲ್ಲಿ ಎಲ್ಲರೂ ಕೆಸರಿನಲ್ಲಿ ಸಿಲುಕಿ ಹಾಕಿಕೊಂಡಿದ್ದಾರೆ. ತಂದೆ ಬಂದು ಕೆಸರಿನಿಂದ ತೆಗೆಯುವಂತಹ ಸಾಧನೆ ಮಾಡಿಸುತ್ತಾರೆ. ಮಾಯೆಯು ರೆಕ್ಕೆಗಳನ್ನು ಕತ್ತಿರಿಸಿದೆ, ಹಾರಲು ಸಾಧ್ಯವಿಲ್ಲ. ಈಗ ಎಲ್ಲರೂ ಪವಿತ್ರವಾಗಿ ವಾಪಸ್ ಮನೆಗೆ ಹೋಗಬೇಕು.

ತಂದೆಯಿಂದ ಪುನಃ ರಾಜ್ಯಭಾಗ್ಯವನ್ನು ಪಡೆಯಲು ನೀವು ಪುರುಷಾರ್ಥ ಮಾಡುತ್ತಿದ್ದೀರಿ. ತಂದೆ ನಿಮಗೆ ಖುಷಿ ಇರಬೇಕೆಂದು ತಿಳಿಸುತ್ತಿದ್ದಾರೆ. ಯಾರು ಚೆನ್ನಾಗಿ ಧಾರಣೆ ಮಾಡಿ ಅನ್ಯರನ್ನು ತನ್ನ ಸಮಾನ ಮಾಡಿಕೊಳ್ಳುತ್ತಾರೋ ಅವರಿಗೆ ಬಹಳ ಖುಷಿ ಇರುತ್ತದೆ. ನಂಬರ್‌ನಲ್ಲಿ ಯಾರು ಪಾಸ್ ಆಗುತ್ತಾರೆಯೋ ಅವರಿಗೆ ಅವಶ್ಯವಾಗಿ ಖುಷಿ ಇರುತ್ತದೆಯಲ್ಲವೇ. ಸರ್ಕಾರವೂ ಸಹ ಸ್ಕಾಲರ್ಷಿಪ್ ಕೊಡುತ್ತದೆ. ನಿಮ್ಮದು ಮಾಲೆ ತಯಾರಾಗಿದೆ, 108ರ ಮಾಲೆಯೂ ಇರುತ್ತದೆ. 16,108ರ ಮಾಲೆಯೂ ಸಹ ಇರುತ್ತದೆ. ಒಂದು ಬಾಕ್ಸ್ ಮಾಡಿ, ಅದರಲ್ಲಿ ಹಾಕಿ ಬಿಡುತ್ತಾರೆ. ಈಗ ನಿಮಗೆ ಮಾಲೆ ಯಾರದಾಗಿದೆ ಎಂದು ಗೊತ್ತಿದೆಯೇನು? ರುದ್ರಾಕ್ಷಿ ಮಾಲೆ ಎಂದು ಯಾವುದಕ್ಕೆ ಕರೆಯಲಾಗುತ್ತದೆ. ಮೊದಲು ಬ್ರಹ್ಮನ ಮಾಲೆ ಆಗಿದೆ. ತಂದೆ ರಚನೆ ಮಾಡುತ್ತಾರಲ್ಲವೇ. ಯಾರು ಬ್ರಹ್ಮನ ಹೃದಯದಲ್ಲಿ ಇರುತ್ತಾರೋ ಅವರೇ ಶಿವಬಾಬಾನ ಹೃದಯದಲ್ಲಿ ಇರುತ್ತಾರೆ. ಇದು ಬ್ರಹ್ಮನ ಮಾಲೆಯಾಗಿದೆ.

ಎಲ್ಲರೂ ಮಕ್ಕಳಲ್ಲವೇ. ಅಂದಾಗ ಮೊದಲು ಅವರ ಮಾಲೆ ನಂತರ ರುದ್ರ ಮಾಲೆ ಆಗಬೇಕು, ನಂತರ ಹೋಗಿ ವಿಷ್ಣುವಿನ ಕೊರಳಿನಲ್ಲಿ ಪೋಣಿಸಲ್ಪಡುತ್ತೀರಿ. ಇದು ಸ್ವರ್ಗದ ರಾಜ್ಯ ಈಗ ಸ್ಥಾಪನೆ ಆಗುತ್ತಿದೆ. ಈ ಮನುಷ್ಯ ಸೃಷ್ಟಿಯೇ ಸ್ವರ್ಗ, ನರಕ ಆಗುತ್ತದೆ. ಸ್ವರ್ಗದಲ್ಲಿ ದೇವಿ-ದೇವತೆಯರು ಇರುತ್ತಾರೆ, ಅದಕ್ಕೆ ಹೆವನ್ ಎಂದು ಕರೆಯಲಾಗುತ್ತದೆ. ಸ್ವರ್ಗದವರೇ ನಂತರ ನರಕಕ್ಕೆ ಬರುತ್ತಾರೆ. ಮಾಯೆಯ ಮೇಲೆ ವಿಜಯವನ್ನು ಪಡೆದು ಜಗತ್ಜೀತರಾಗುತ್ತೀರಿ. ಈ ಪಾರ್ಟ್ ನಾವು ಅನೇಕ ಬಾರಿ ಮಾಡುತ್ತೇವೆಂದು ನೀವು ಹೇಳುತ್ತೀರಿ. ಯಾರಾದರೂ ಕೇವಲ ನೀವೇ ಸ್ವರ್ಗ ನೋಡುತ್ತೀರಾ, ನಾವು ಸ್ವರ್ಗ ನೋಡುವುದಿಲ್ಲವೇನು? ಎಂದು ಕೇಳಿದಾಗ ಎಲ್ಲರೂ ಅಲ್ಲಿಗೆ ಹೋಗುತ್ತಾರೇನು ಎಂದು ಹೇಳಿ. ಅಸಂಭವ ಆಗಿದೆ. ಪ್ರತಿಯೊಬ್ಬರು ತಮ್ಮ ಸತೋ, ರಜೋ, ತಮೋನಲ್ಲಿ ಪಾರ್ಟ್ ಮಾಡುತ್ತಾರೆ. ಇದು ಯಾರಿಗೂ ಗೊತ್ತಿಲ್ಲ. ನಮ್ಮ ರಾಜ್ಯಭಾಗ್ಯ ಸ್ಥಾಪನೆ ಆಗುತ್ತಿದೆ ಎಂದು ನಿಮಗೆ ಗೊತ್ತಿದೆ. ನಾವು ಸ್ವರ್ಗದ ಮಾಲೀಕರಾಗುತ್ತಿದ್ದೇವೆ. ಡ್ರಾಮಾ ಅವಶ್ಯವಾಗಿ ನಿಮ್ಮಿಂದ ಪುರುಷಾರ್ಥ ಮಾಡಿಸುತ್ತದೆ. ಡ್ರಾಮಾ ಇವರ ಮೂಲಕ ಮುರಳಿಯನ್ನು ನಡೆಸುತ್ತಿದೆ. ಪುರುಷಾರ್ಥವನ್ನು ಬಿಟ್ಟು ನೀವು ಇರಲು ಸಾಧ್ಯವಿಲ್ಲ. ಕುಳಿತುಕೊಳ್ಳುವುದಿಲ್ಲ. ಕಲ್ಪದ ಹಿಂದೆ ಹಾಗೆ ಮುರಳಿ ನಡೆಸಿದಿರಿ ಅದೇ ಡ್ರಾಮಾನುಸಾರ ನಡೆಯುತ್ತದೆ. ಎಷ್ಟು ಗುಹ್ಯ ಮಾತುಗಳು. ಡ್ರಾಮಾ ಅವಶ್ಯವಾಗಿ ಪುನರಾವರ್ತನೆ ಆಗಬೇಕು. ನಾವಂತೂ ನಿಶ್ಚಿಂತ ಚಕ್ರವರ್ತಿಗಳು. ಪರಮಪಿತ ಪರಮಾತ್ಮನ ಮೊಮ್ಮಕ್ಕಳಾಗಿದ್ದೇವೆ. ಅವರಿಗೆ ಏನು ಚಿಂತೆ ಇದೆ. ಇದು ರಾಜಯೋಗ ಆಗಿದೆ. ತಂದೆಯು ಹೇಳುತ್ತಾರೆ - ಈಗ ಹಳೆಯ ಲೆಕ್ಕಾಚಾರವನ್ನು ಸಮಾಪ್ತಿ ಮಾಡಿ, ಇದರಿಂದ ಬುದ್ಧಿಯೋಗವನ್ನು ತೆಗೆದು ಹಾಕಿ. ಮತ್ತೆ ಎಷ್ಟು ಜ್ಞಾನ ಯೋಗದಿಂದ ಜಮಾ ಮಾಡಿಕೊಳ್ಳುತ್ತೀರೋ ಅಷ್ಟು ನಿಮ್ಮ ಜೋಳಿಗೆ 21 ಜನ್ಮಗಳಿಗಾಗಿ ತುಂಬುತ್ತಾ ಹೋಗುತ್ತದೆ, ಇದರಲ್ಲಿ ಹೆದರುವ ಮಾತೇನೂ ಇಲ್ಲ. ತಂದೆಯಂತೂ ಕೊಡುವವರಾಗಿದ್ದಾರೆ. ನಿಮ್ಮದು ಏನೆಲ್ಲ ಇದೆಯೋ ಅದನ್ನು ಅರ್ಪಣೆ ಮಾಡಿ ಎಂದು ತಂದೆಯು ಹೇಳುತ್ತಾರೆ. ಇಲ್ಲಿ ಯಾವುದೇ ಮಹಲ್ ಮಾಡಬೇಕಾಗಿಲ್ಲ. ಈ ಹಣದಿಂದ ಏನು ಮಾಡಬೇಕು? ಕೇವಲ 3 ಅಡಿಯಷ್ಟು ಜಾಗವನ್ನು ತೆಗೆದುಕೊಂಡು ಸೇವಾಕೇಂದ್ರವನ್ನು ತೆಗೆಯುತ್ತಾರೆ. ಇದು ಜಬರ್ದಸ್ತ್ ವಿಶ್ವ ವಿದ್ಯಾಲಯ ಅಥವಾ ಆಸ್ಪತ್ರೆ ಆಗಿದೆ. ಆ ಆಸ್ಪತ್ರೆ ಆದರೆ ಅನೇಕ ಇರುತ್ತದೆ. ಇಲ್ಲಾದರೆ ಒಂದೇ ಆಸ್ಪತ್ರೆ. ಯಾರು ಧಾರ್ಮಿಕ ವ್ಯಕ್ತಿಗಳು ಇರುತ್ತಾರೋ ಅವರು ನಾವು ಏಕೆ ಮನುಷ್ಯರು ಸದಾ ಆರೋಗ್ಯವಂತರಾಗಿರುವ ಆಸ್ಪತ್ರೆಯನ್ನು ತೆಗೆಯಬಾರದು ಎಂದು ಹೇಳುತ್ತಾರೆ, ಬಾಬಾ ಆರೋಗ್ಯ, ಐಶ್ವರ್ಯ ಕೊಡುತ್ತಾರೆಂದರೆ ಅವರು ಬಾಬಾ ನಿಮ್ಮವರಾಗಿದ್ದಾರೆ, ಯಾವ ಕೆಲಸಕ್ಕೆ ಬೇಕೋ ಆ ಕೆಲಸಕ್ಕೆ ಉಪಯೋಗಿಸಿಕೊಳ್ಳಿ ಎಂದು ಹೇಳುತ್ತಾರೆ. ಅಂದಾಗ ನಿಶ್ಚಯ ಮಾಡಿಕೊಂಡು ಪೂರ್ತಿ ಫಾಲೋ ಮಾಡಬೇಕಾಗಿದೆ. ಪ್ರತಿಯೊಬ್ಬರು ತಮ್ಮ ಜಾತಿಯನ್ನು ಮೇಲೆತ್ತುತ್ತಾರಲ್ಲವೇ. ನಾವು ಬ್ರಾಹ್ಮಣರೆಂದು ನೀವು ಹೇಳುತ್ತೀರಿ ಅಂದಾಗ ಏಕೆ ಎಲ್ಲವನ್ನೂ ಅರ್ಪಣೆ ಮಾಡಬಾರದು. ತಂದೆ 21 ಜನ್ಮಗಳ ರಾಜ್ಯ ಭಾಗ್ಯವನ್ನು ಕೊಡುತ್ತಾರೆ. ತಂದೆಯ ಸೇವೆಯಲ್ಲಿ ತತ್ಪರರಾಗಿದ್ದರೆ ನೀವು ಎಂದೂ ಹಸಿವಿನಿಂದ ಸಾಯುವುದಿಲ್ಲ. ನಮ್ಮದು ಏನಾದರೂ ಖರ್ಚು ಇದೆಯೇನು? ನೀವು ಕೇವಲ ಹೊಟ್ಟೆಗೋಸ್ಕರ ಎರಡು ರೊಟ್ಟಿಯನ್ನು ತಿನ್ನುತ್ತೀರಿ, ಇನ್ನೇನು ಬೇಕು. ಮನುಷ್ಯರಿಗಾದರೆ ಬಹಳ ಖರ್ಚು ಇರುತ್ತದೆ. ವಿವಾಹ ಮುಂತಾದುಗಳಿಗೆ ಎಷ್ಟೊಂದು ಖರ್ಚು ಮಾಡುತ್ತಾರೆ. ನಮ್ಮದು ಏನೂ ಖರ್ಚಿಲ್ಲ. ನಿಮಗೆ ಶಿವಬಾಬಾನ ಜೊತೆ ವಿವಾಹ ಆಗುತ್ತದೆ. ಸ್ವಲ್ಪನೂ ಖರ್ಚಾಗುವುದಿಲ್ಲ. ವಿವಾಹ ಮಾಡಿಕೊಂಡು ನಾವು ತಂದೆಯ ಹತ್ತಿರ ಹೋಗುತ್ತೇವೆ. ಇಲ್ಲೂ ಸಹ ನೀವು ಮಕ್ಕಳು ಸೇವೆ ಮಾಡಬೇಕು. ನಿಮ್ಮ ನೆನಪಾರ್ಥವನ್ನು ನೋಡಿ ಖುಷಿ ಆಗುತ್ತದೆ. ಇದು ನಮ್ಮ ಬಾಬಾ-ಮಮ್ಮಾನ ನೆನಪಾರ್ಥವಾಗಿದೆ ಮತ್ತೆ ನಾವು ದೇವೀ-ದೇವತೆಗಳದ್ದೂ ನೆನಪಾರ್ಥವಿದೆ. 5-7 ಮುಖ್ಯ ನೆನಪಾರ್ಥಗಳಿದೆ. ಮೊಟ್ಟ ಮೊದಲು ಶಿವಬಾಬಾನ ನೆನಪಾರ್ಥ ಮುಖ್ಯವಾಗಿದೆ. ಅವರೊಬ್ಬರಿಗೆ ಅನೇಕ ಹೆಸರುಗಳಿದೆ. ಮತ್ತೆ ಸೂಕ್ಷ್ಮವತನವಾಸಿ ಬ್ರಹ್ಮಾ-ವಿಷ್ಣು-ಶಂಕರನ ನೆನಪಾರ್ಥ, ನಂತರ ಮನುಷ್ಯ ಸೃಷ್ಟಿಯಲ್ಲಿ ಸಂಗಮಯುಗಿ ಜಗದಾಂಬ, ಜಗತ್ಪಿತ ಹಾಗೂ ನೀವು ಶಕ್ತಿಯರ ನೆನಪಾರ್ಥ, ಮಕ್ಕಳು ಹಾಗೂ ಸತ್ಯಯುಗದಲ್ಲಿ ಲಕ್ಷ್ಮೀ-ನಾರಾಯಣರದ್ದು ಇರುತ್ತದೆ. ಬಾಕಿ ಅನೇಕ ಪ್ರಕಾರದ ಮಂದಿರಗಳನ್ನು ಮಾಡುತ್ತಾರೆ. ಅದರಲ್ಲಿ ಎಷ್ಟು ಅಲೆಯಬೇಕಾಗುತ್ತದೆ. ನೀವು ಎಲ್ಲಾ ಮಾತುಗಳಿಂದ ಮುಕ್ತರಾಗುತ್ತೀರಿ ಅಂದಾಗ ಎಷ್ಟು ಖುಷಿಯಲ್ಲಿ ಇರುತ್ತೀರಿ. ಮನುಷ್ಯರಿಂದ ದೇವತೆ ಆಗುವಂತಹ ವಿಶ್ವ ವಿದ್ಯಾಲಯ ಎಲ್ಲೂ ಇಲ್ಲ. ನಿಮ್ಮದು ಈಶ್ವರೀಯ ವಿದ್ಯಾರ್ಥಿ ಜೀವನವಾಗಿದೆ. ನೀವು ಉತ್ತೀರ್ಣರಾಗಿ ಟ್ರಾನ್ಸ್ಫರ್ ಆಗಿ ಬಿಡುತ್ತೀರಿ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತ ಪಿತ ಬಾಪ್ದಾದಾರವರ ನೆನಪು ಪ್ರೀತಿ ಮತ್ತು ಗುಡ್ ಮಾರ್ನಿಂಗ್. ಆತ್ಮಿಕ ತ0ದೆಯ ಆತ್ಮಿಕ ಮಕ್ಕಳಿಗೆ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ**:**

1. ಅಮೃತವೇಳೆ ಮುರಳಿಯನ್ನು ಕೇಳಿ ಮತ್ತೆ ಪಾಯಿಂಟ್ ರಿಪೀಟ್ ಮಾಡಬೇಕು. ಮುರಳಿಯನ್ನು ಅವಶ್ಯವಾಗಿ ಬರೆಯಬೇಕು. ಖುಷಿಯಲ್ಲಿ ಇರಲು ತಮ್ಮ ಸಮಾನ ಮಾಡುವ ಸೇವೆಯನ್ನು ಮಾಡಿ.

2. ಬ್ರಹ್ಮಾ ತಂದೆಯ ಹೃದಯದಲ್ಲಿ ಏರಲು ಜ್ಞಾನ-ಯೋಗದಲ್ಲಿ ತೀಕ್ಷ್ಣವಾಗಿ ಹೋಗಬೇಕು. ನಂಬರ್ವನ್ ಉತ್ತೀರ್ಣರಾಗಿ ಸ್ಕಾಲರ್ಷಿಪ್ನ್ನು ಪಡೆಯಬೇಕು.

ವರದಾನ: ಡ್ರಾಮದಲ್ಲಿ ಸಮಸ್ಯೆಗಳನ್ನು ಆಟ ಎಂದು ತಿಳಿದು ಸಮರ್ಪಕವಾಗಿ ಪಾತ್ರ ಅಭಿನಯಿಸುವಂತಹ ಹೀರೋ ಪಾತ್ರಧಾರಿ ಭವ.

ಹೀರೋ ಪಾತ್ರಧಾರಿಯೆಂದು ಯಾರಿಗೆ ಹೇಳಲಾಗುವುದೆಂದರೆ ಯಾರ ಯಾವುದೇ ಪಾತ್ರ ಸಾಧಾರಣವಾಗಿರಬಾರದು, ಪ್ರತಿ ಪಾತ್ರ ಸಮರ್ಪಕವಾಗಿರಬೇಕು. ಎಷ್ಟೇ ಸಮಸ್ಯೆಗಳು ಇರಲಿ, ಎಂತಹದೇ ಪರಿಸ್ಥಿತಿಗಳು ಇರಲಿ ಯಾರದೇ ಅಧೀನತೆ ಇಲ್ಲ, ಅಧಿಕಾರಿಗಳಾಗಿ ಸಮಸ್ಯೆಗಳನ್ನು ಆಟವಾಡುವ ರೀತಿ ಪಾರು ಮಾಡುತ್ತಾರೆ. ಆಟದಲ್ಲಿ ಸದಾ ಖುಶಿ ಇರುವುದು, ಎಂತಹದೇ ಆಟ ಆಗಿರಲಿ, ಹೊರಗಿನಿಂದ ಅಳುವಂತಹ ಪಾತ್ರವಿರಲಿ ಆದರೆ ಒಳಗೆ ಇದೇ ಇರಲಿ ಇದೆಲ್ಲಾ ಬೇಹದ್ದಿನ ಆಟವಾಗಿದೆ. ಆಟ ಎಂದು ತಿಳಿಯುವುದರಿಂದ ದೊಡ್ಡ ಸಮಸ್ಯೆಯು ಸಹ ಹಗುರವಾಗಿ ಬಿಡುವುದು.

ಸ್ಲೋಗನ್: ಯಾರು ಸದಾ ಪ್ರಸನ್ನರಾಗಿರುತ್ತಾರೆ ಅವರೇ ಪ್ರಶಂಸೆಗೆ ಪಾತ್ರರಾಗುತ್ತಾರೆ.